<u>ದಿನಾಂಕ **11-08-2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟಿ ಸವಾಲು ಃ ಪ್ರತಿವಾದಿ ಪರ ವಕೀಲರಿಂದ</u>

ನಾನು 7ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದಿ ಮತ್ತು ಪ್ರತಿವಾದಿಗಳು ನನ್ನ ಚಿಕ್ಕಪ್ಪನ ಮಕ್ಕಳು. ವಾದಿ ಮತ್ತು ಪ್ರತಿವಾದಿಗಳು ಯಾವ ಯವ ಪ್ರಕರಣ ನಡೆಸುತ್ತಿದ್ದಾರೆ ಎಂದು ನನಗೆ ಸಂಪೂರ್ಣ ಗೊತ್ತಿಲ್ಲ. ಜಮೀನು ನಮ್ಮಗಳಿಗೆ ಬರಬೇಕು ಎಂದು ದಾವೆ ಸಲ್ಲಿಸಿರುತ್ತಾರೆ. ನನ್ನ ತಂದೆ ಮತ್ತು ಪ್ರತಿವಾದಿಗಳ ತಂದೆ ಸ್ವಂತ ಅಣ್ಣತಮ್ಮಂದಿರು . ನನ್ನ ತಂದೆಯ ಅಣ್ಣತಮ್ಮಂದಿರು ಅವರವರ ಆಸ್ತಿಗಳನ್ನು ನೊಂದಾಯಿತ ಪತ್ರದ ಮೂಲಕ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಾತ ಅಣ್ಣೇಗೌಡರಿಗೆ 4 ಜನ ಗಂಡು ಮಕ್ಕಳು ಅವರುಗಳೆಂದರೆ ವೆಂಕಟರಮಣೇಗೌಡ, ಅಣ್ಣಸ್ವಾಮಿಗೌಡ, ಪುಟ್ಟಸ್ವಾಮಿಗೌಡ ಮತ್ತು ಭೀಮೇಗೌಡ . ಪ್ರಮಾಣ ಪತ್ರವನ್ನು ನಾನೇಹೇಳಿ ಬರೆಸಿರುತ್ತೇನೆ. ನನ್ನ ಚಿಕ್ಕಪ್ಪ ಪುಟ್ಟಸ್ವಾಮಿಗೌಡ ಯಾವಾಗ ಮರಣ ಹೊಂದಿರುತ್ತಾರೆ ಎಂದು ಗೊತ್ತಿಲ್ಲ. ನನ್ನ ತಂದೆ 1993 ರಂದು ಮರಣ ಹೊಂದಿರುತ್ತಾರೆ. ಬಾಯಿಮಾತಿನ ವಿಭಾಗ ಪತ್ರಕ್ಕೆ ನನ್ನನ್ನು ಕರೆದಿಲ್ಲ. ಸಮಾರು 30 ವರ್ಷಗಳ ಹಿಂದೆ ವಿಭಾಗವಾಗಿರುತ್ತದೆ. ಬಾಯಿಮಾತಿನ ವಿಭಾಗಪತ್ರದ ಸಮಯದಲ್ಲಿ ನನ್ನ ಇಬ್ಬರು ಬಾವಂದಿರು ನನ್ನ ಅಣ್ಣ , ಕರಿಗೌಡ, ನಂತರ ತಿಮ್ಮೇಗೌಡ ಇದ್ದರು. ನನ್ನ ತಂದೆ ವಿಭಾಗಮಾಡಿಕೊಂಡ ನೊಂದಾಯಿತ ಪತ್ರಕ್ಕೆ ಯಾರು ಸಾಕ್ಷಿದಾರರು ಇದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ಅಣ್ಣತಮ್ಮಂದಿರು ಪಾಲುಪಾರಿಕತ್ತು ಬರವಣಿಗೆಯಲ್ಲಿ ಆಗಿರುತ್ತದೆ ಆಗ ಯಾರು ಸಾಕ್ಷಿದಾರರು ಇದ್ದರು ಎಂದು ನನಗೆ ಗೊತ್ತಿಲ್ಲ. ವಿಭಾಗ ಪತ್ರದ ದಿನ ಬೆಳಗ್ಗೆ 1.00 ಗಂಟೆಗೆ ಹೋಗಿದ್ದೆ. ಮೌಖಿಕ ವಿಭಾಗ ಪತ್ರದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ. ಮೌಖಿಕ ವಿಭಾಗ ಪತ್ರದ ಬಗ್ಗೆ ನನಗೆ ಜ್ಞಾಪಕ ಇರುವುದಿಲ್ಲ. ವಾದಿ ಪ್ರತಿವಾದಿಗಳು ಹೇಳಿದ ಕಾರಣ ನನಗೆ ಮೌಖಿಕ ವಿಭಾಗ ಆಗಿರುತ್ತದೆ ಎಂದು ತಿಳಿದಿರುತ್ತದೆ. ಅಣ್ಣತಮ್ಮಂದಿರು ಹೇಳಿರುತ್ತಾರೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುತ್ತೇನೆ.

ಎಷ್ಟು ಆಸ್ತಿಗಳು ಬಾಯಿಮಾತಿನಲ್ಲಿ ವಿಭಾಗವಾದ ಪ್ರಕಾರ ಯಾರಿಗೆ ಎಷ್ಟು ಆಸ್ತಿಗಳು ಬಂದಿದೆ ಎಂದು ನಿಖರವಾಗಿ ಗೊತ್ತಿಲ್ಲ. ಅದೇ ರೀತಿ ಖಾತೆ ಬದಲಾವಣೆ ಆದ ಬಗ್ಗೆ ನನಗೆ ಗೊತ್ತಿಲ್ಲ.

ಪಂಚಾಯ್ತಿ ಪಾಲುಪಟ್ಟಿಯನ್ನು ಯಾವಾಗ ಬರೆದಿರುತ್ತಾರೆ ಎಂದು ಗೊತ್ತಿಲ್ಲ. ಆ ದಿನ 1.30 ರ ಸಮಯಕ್ಕೆ ಹೋಗಿದ್ದೆ. ಪಾಲು ಪಟ್ಟಿಗೆ ನನ್ನನ್ನು ಕರೆದಿರುತ್ತಾರೆ. ಆ ದಿನ 6

ಜನ ಅಣ್ಣತಮ್ಮಂದಿರು , ಮತ್ತು ರಾಜಣ್ಣ , ಪಾಳ್ಯದ ರಾಜಣ್ಣ, ಸಿದ್ದೇಗೌಡ, ಕರಿಗೌಡ , ನಾನು ತಿಮ್ಮೇಗೌಡ ಇದ್ದೆವು. ಈಗ ಹೇಳಿದಷ್ಟು ಜನರನ್ನು ಬಿಟ್ಟರೆ ಬೇರೆ ಜನ ಇದ್ದ ಬಗ್ಗೆ ನನಗೆ ನೆನಪಿಲ್ಲ. ಪಾಲು ಪಟ್ಟಿ ಬರೆಯುವಾಗ ಯಾವ ದಾಖಲೆಗಳನ್ನು ಯಾರ ಮೂಲಕ ಕೊಟ್ಟಿರುತ್ತಾರೆ ಎಂದು ಹೇಳಲಾಗುವುದಿಲ್ಲ.ಪಾಲುಪಟ್ಟಿ ಬರೆಯಲು ಯಾರು ಹೇಳಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಎಷ್ಟು ಪುಟಗಳ ಪತ್ರ ಬರೆದಿರುತ್ತಾರೆ ಎಂದು ನನಗೆ ನೆನಪಿಲ್ಲ. ಯಾರು ಪತ್ರವನ್ನು ಬರೆದಿರುತ್ತಾರೆ ಎಂದು ನೆನಪಿಲ್ಲ. ಬೆಳಗೆ 10 ರಿಂದ 3 ಗಂಟೆವರೆಗೆ ಬರೆದಿರುತ್ತಾರೆ. ಪಾಲುಪಟ್ಟಿ ದಿನ ಎಷ್ಟು ಆಸ್ತಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ವಿಭಾಗ ಪತ್ರ ಬರೆಯುವ ಮೊದಲು ಯಾರು ಯಾರಿಗೆ ಯಾವ ಆಸ್ತಿ ಎಂದು ಒಪ್ಪಂದ ಮಾಡಿಕೊಂಡ ಬಗ್ಗೆ ನನಗೆ ಜ್ಞಾಪಕ ಇಲ್ಲ. ಪತ್ರ ಯಾರು ಬರೆದಿದ್ದಾರೆ ಎಂದು ನನಗೆ ಪರಿಚಯ ಇರುವುದಿಲ್ಲ. ಅವರನ್ನು ನಾನು ಮೊದಲು ನೋಡಿಲ್ಲ. ಪತ್ರ ಬರಹಗಾರರಿಗೆ ಎಷ್ಟು ವಯಸ್ಸಾಗಿತ್ತು ಎಂದು ಗೊತ್ತಿಲ್ಲ. ಅವರು ಬದುಕಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

ವಿಭಾಗಪತ್ರಕ್ಕೆ ಯಾರು ಮೊದಲು ಸಹಿ ಮಾಡಿದ್ದಾರೆ ಎಂದು ಗೊತ್ತಿಲ್ಲ. ಪಾಲುಪಟ್ಟಿಯಲ್ಲಿ ಏನು ವಿಚಾರ ಬರೆದಿರುತ್ತಾರೆ ಯಾರು ಯಾರು ಸಹಿ ಮಾಡಿರುತ್ತಾರೆ ಎಂದು ನಾನು ಓದಿ ತಿಳಿದುಕೊಂಡಿಲ್ಲ. ನಾನೇ ಕೊನೆಯದಾಗಿ ಸಹಿ ಮಾಡಿರುತ್ತೇನೆ. ಆ ದಿನ ಪಾಲುಪಟ್ಟಿಗೆ ಯಾರು ಎಷ್ಟು ಕಡೆ ಸಹಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ನಾನು ಒಂದು ಪಾಲುಪಟ್ಟಿಗೆ ಒಂದು ಸಹಿ ಮಾಡಿರುತ್ತೇನೆ. ಅದೇ ರೀತಿ ಉಳಿದ 5 ಪಾಲುಪಟ್ಟಿಗೆ ಸಹಿ ಮಾಡಿರುತ್ತೇನೆ ಎಂದು ಗೊತ್ತಿಲ್ಲ. ನಾನು ಸಹಿ ಮಾಡಿದಾಗ 3.30 ರ ಸಮಯ ಆಗಿತ್ತು. ಪತ್ರ ಬರೆದ ನಂತರ ಸಹಿ ಮಾಡಿರುತ್ತೇನೆ. ಪತ್ರ ಬರಹಗಾರರು ಯಾವಾಗ ಸಹಿ ಮಾಡಿದ್ದಾರೆ ಎಂದು ನನಗೆ ಜ್ಞಾಪಕ ಇಲ್ಲ . ಬಿಕಲಂ ದಾರರು ಸಹಿ ಮಾಡಿರುತ್ತಾರೋ ಇಲ್ಲವೊ ನನಗೆ ಗೊತ್ತಿಲ್ಲ. ವಿಭಾಗ ಪತ್ರಕ್ಕೆ ನಾನು ಹೇಳಿದವರು ಬಿಟ್ಟು ಬೇರೆಯವ ಸಹಿಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ.

ಪಾಲುಪಟ್ಟಿಯನ್ನು ನೋಡಿರುತ್ತೇನೆ. ನಾನು ಸಹಿ ಮಾಡುವಾಗ ನೋಡಿರುತ್ತೇನೆ. ನನ್ನ ಚಿಕ್ಕಮ್ಮನ ಹೆಸರು ಬೋರಮ್ಮ. ಅವರು ಯಾವಾಗ ತೀರಿಕೊಂಡಿದ್ದಾರೆ ಎಂದು ನನಗೆ ಜ್ಞಾಪನ ಇಲ್ಲ. ಮೌಖಿಕ ವಿಭಾಗವಾಗುವಾಗ ನನ್ನ ,ಚಿಕ್ಕಮ್ಮ ಇರಲಿಲ್ಲ. ಸಾಕ್ಷಿಯು ಮುಂದುವರೆದು ನನ್ನ ಚಿಕ್ಕಮ್ಮ ಇದ್ದರು. ಬಾಯಿಮಾತಿನಲ್ಲಿ ವಿಭಾಗ ವಾಗುವಾಗ ಅಥವಾ ಲಿಖಿತವಾಗಿ ವಿಭಾಗ ಮಾಡಿಕೊಳ್ಳುವಾಗ ನನ್ನ ಚಿಕ್ಕಮ್ಮ ಇದ್ದರೋ ಇಲ್ಲವೋ

ಗೊತ್ತಿಲ್ಲ. ವಿಭಾಗ ಪತ್ರ ಸುಮಾರು 26-27 ವರ್ಷದ ಹಿಂದೆ ಆಗಿರಬಹುದು. ಬಾಯಿಮಾತಿನದಲ್ಲಿ ವಿಭಾಗವಾದ ಆಸ್ತಿಗಳನ್ನು ಬರವಣಿಗೆ ಮಾಡಿಕೊಳ್ಳುವಾಗ ಅವುಗಳನ್ನು ನಮೂದಿಸಿದ್ದರೋ ಇಲ್ಲವೊ ನನಗೆ ನೆನಪಿಲ್ಲ. ಮೌಖಿಕ ವಿಭಾಗದ ಬಗ್ಗೆ ಲಿಖಿತ ವಿಭಾಗ ಪತ್ರ ಮಾಡಿಕೊಂಡಿರುತ್ತಾರೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೆ. ಈ ವಿಷಯ ಪಂಚಾಯ್ತಿ ಪಾಲುಪಟ್ಟಿ ಆಗುವಾಗ ಆಗಿದೆಯೋ ಇಲ್ಲವೊ ನನಗೆ ನೆನಪಿಲ್ಲ. ಪಂಚಾಯ್ತಿ ಪಾಲುಪಟ್ಟಿಯಲ್ಲಿ ಏನು ಬರೆದಿರುತ್ತಾರೆ ಮತ್ತು ಅದರ ನಿಬಂದನೆಗಳ ಬಗ್ಗೆ ಗೊತ್ತಿಲ್ಲ. ಪಂಚಾಯ್ತಿ ಪಾಲುಪಟ್ಟಿ ಮನೆಯಲ್ಲಿ ಪುಟ್ಟಸ್ವಾಮಿ ರವರ ಮನೆಯಲ್ಲಿ ಬರೆಯಲಾಯಿತು. ಪಾಲುಪಟ್ಟಿ ಬರೆಯುವಾಗ ಯಾವುದಾದರೂ ದಾಖಲೆ ಇಟ್ಟುಕೊಂಡಿದ್ದರಾ ಎಂದರೆ ನೆನಪಿಲ್ಲ.

ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.